ಬುಧವಾರ 17–09–2025 ಬೆಂಗಳೂರು ಬೆಲೆ: 5ರೂ, 4ಪಟಗಳು ಸಂಪುಟ 01–ಸಂಚಿಕೆ 49

Digital Varthe Kannada Daily Volume 01 - Issue 49 Wednesday16-09-2025 Price: 5/- Rs 2 Pages Bengalore

DIGITAL VARTHE

www.digitalvarthe.com
digitalvarthe@gmail.com

# ಡಿಜಿಟಲ್ ವಾರ್ತೆ

ಕನ್ನಡಿಗರ ಶಕ್ತಿ

ಅಭಿಷೇಕ್ ಚಿಕ್ಕಮಾರನಹಳ್ಳಿ
ಸಂಪಾದಕರು

ಪುರುಷೋತ್ತಮ್ ಬಿ.ಹೆಚ್
ವ್ಯವಸ್ಥಾಪಕರು

RNI:KNKAN/25/A1348

ಕನ್ನಡ ದಿನಪತ್ರಿಕೆ

## ಒಳ ಮೀಸಲಾತಿಯಿಂದ ಭೋವಿ ಸಮುದಾಯಕ್ಕೆ ಅನ್ಯಾಯವಾಗಿದೆ: ರಂಗನಾಥ ಶ್ರೀ



ಬೆಂಗಳೂರು: ರಾಜ್ಯದಲ್ಲಿ ಒಳ ಮೀಸಲಾತಿ ಜಾ–ರಿಯಿಂದ ಭೋವಿ ಸಮುದಾಯಕ್ಕೆ ಅನ್ಯಾಯ ಆಗಿದೆ ಎಂದು ಪಂಚ ಪೀಠಧ್ಯಕ್ಷ ಬಂಗಾರು ರಂಗನಾಥ್ ಸ್ವಾಮಿಗಳು ಹೇಳಿದರು. ನಗರದ ಖಾಸಗಿ ಹೋಟೆಲ್ ನಲ್ಲಿ ಆಯೋಜಿಸಿದ ಒಳ ಮೀಸಲಾತಿ ಕುರಿತು ಚಿಂತನ ಸಭೆಯಲ್ಲಿ ಭಾಗವಹಿಸಿ ಮಾತನಾಡಿ ಅವರು, ರಾಜ್ಯದಲ್ಲಿ ಭೋವಿ ಸಮುದಾಯ ಇಂದಿಗೂ ಕಲ್ಲು ಹಾಗೂ ಮಣ್ಣಿಗೆ ಸಂಬಂಧಿಸಿದ ಕೆಲಸ ಮಾಡುತ್ತಾ ಜೀವನ ದೂಡುತ್ತಿದ್ದಾರೆ.

ಹೀಗಾಗಿ ಭೋವಿ ಸಮುದಾಯಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ಮೀಸಲಾತಿಯ ಪ್ರತಿಫಲ ಸಿಕ್ಕಿಲ್ಲ. ಇದರ ನಡುವೆ ಸಮುದಾಯವನ್ನು ಮೀಸಲಾತಿಯಿಂದ ವಂಚಿತರನ್ನಾಗಿ ಮಾಡುವ ಹುನ್ನಾರ ನಡೆಯುತ್ತಿದೆ ಎಂದು ತಿಳಿಸಿದರು. ಕರ್ನಾಟಕ ಸರ್ಕಾರ ಒಳ ಮೀಸಲಾತಿಗೆ ಸಂಬಂಧಿಸಿದಂತೆ ತೆಗೆದು ಕೊಂಡಿರುವ ನಿರ್ಧಾರ ಭೋವಿ, ಕೊರಚ, ಕೊರಮ, ಲಂಬಾಣಿ ಸಮುದಾಯದ ಬಡ ಜನರಿಗೆ ಅನ್ಯಾಯ ಆಗಿದೆ. ಇದನ್ನು ಖಂಡಿಸಿ ರಾಜ್ಯದ ಎಲ್ಲಾ ಜಿಲ್ಲಾ ತಾಲೂಕು ಗಳಲ್ಲಿ ಸರ್ಕಾರದ ವಿರುದ್ಧ ತೀವ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರೆ.


ಸಮಾಜದ ಮುಖಂಡರಾದ ಸಂಗಮೇಶ ಮಾತನಾಡಿ ರಾಜ್ಯ ದಲ್ಲಿ ಭೋವಿ ಸಮುದಾಯದ ಆರ್ಥಿಕವಾಗಿ, ಸಾಮಾಜಿಕ ವಾಗಿ ಹಿಂದುಳಿದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಇದರ ನಡುವೆ ಒಳ ಮೀಸಲಾತಿ ಜಾರಿಯಿಂದ ಬಡವರು ಮತ್ತಷ್ಟು ನಿರ್ಗತಿಕರಾಗುವ ಅಪಾಯವಿದೆ. ಈ ಬಗ್ಗೆ ರಾಜ್ಯ ಸರಕಾರ ಎಚ್ಚೆತ್ತುಕೊಂಡು ನಮ್ಮ ಸಮುದಾಯಕ್ಕೆ ಎಲ್ಲ ಕ್ಷೇತ್ರಗಳಲ್ಲೂ ನ್ಯಾಯಬದ್ಧವಾದಂತಹ ಅವಕಾಶಗಳು ಸಿಗುವಂತಹ ನಿಟ್ಟಿನಲ್ಲಿ ರಾಜ್ಯ ಸರಕಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಿದರು. ವಕೀಲರಾದ ಎಲ್ ಶ್ರೀಧರ್ ಮಾತನಾಡಿ, ಸರ್ಕಾರ ಜಾರಿ ಮಾಡಿರುವ ಒಳ ಮೀಸಲಾತಿಯು ಸಮಾಜಕ್ಕೆ ಮಾರಕವಾಗಿದೆ. ಈ ನಿಟ್ಟಿನಲ್ಲಿ ಒಳ ಮೀಸಲಾತಿಗೆ ಸಂಬಂಧಿಸಿದಂತೆ ಅಂಕಿ ಅಂಶಗಳನ್ನು ಮರು ಪರಿಶೀಲನೆಗೆ ಒಪ್ಪಿಸಬೇಕೆಂದು ತಿಳಿಸಿದರು.

ಕಾರ್ಯಕ್ರಮ ದಲ್ಲಿ ಮಂಜುನಾಥ್ ಸ್ವಾಮಿ, ಬಂಗಾರು ರಂಗನಾಥ್ ಸ್ವಾಮಿ, ಬೆಳಗಾವಿ ಚಂದ್ರಶೇಖರ ಸ್ವಾಮಿ, ಕರ್ನಾಟಕ ರಾಜ್ಯ ಭೋವಿ ಸಂಘಟನೆ ಗಳ ಒಕ್ಕೂಟದ ಗೌತಮ್ ವೆಂಕಿ, ಚಿಕ್ಕಬಳ್ಳಾಪುರ ದ ವೆಂಕಟ ರಮಣಪ್ಪ, ರಂಗನಾಥ್, ಎಂ, ಮುನಿರಾಜು, ರಾಜ್ಯ ಪ್ರಶಸ್ತಿ ವಿಜೇತರಾದ ಆನಂದ್ ಸಿ ತಿರುಮಲ, ಶೇಖರಪ್ಪ, ಮುನಿ ನಾರಾಯಣ, ವಕೀಲರು ಆನಂದ್, ಶ್ರೀಧರ್, ಜಗನಾಥ್, ಮುನಿ ನಾರಾಯಣಪ್ಪ, ಯಲ್ಲಪಾ ಶಿಕ್ಷಕರು, ತಿಮ್ಮಪ ಪಾಲ್ಲಗಟ್ಟಿ, ಕೃಷ್ಣ, ಗುರುಮೂರ್ತಿ, ಮಂಜುನಾಥ್ ಪ್ರಸಾದ್, ಮುನಿಕೃಷ್ಣ, ನಾರಾಯಣ, ಸಿದ್ದೇಶ್, ಅಶೋಕ್, ಬಾಬು, ಡಾ. ಆದಿ ನಾರಾಯಣಪ್ಪ, ವೀರ ಅಂಜಿನಯ್ಯ, ಪಾಪಣ್ಣ, ಪತ್ರಕರ್ತ ಸತೀಶ್ ಸೇರಿದಂತೆ ಅನೇಕರು ಭಾಗವಹಿಸಿದರು.

## ಮಾಲೂರು ಶಾಸಕ ಕಾಂಗ್ರೆಸ್ ನಂಜೇಗೌಡ ಆಯ್ಕೆ ಅಸಿಂಧು,

# ಕೋರ್ಟ್ ಮಹತ್ವದ ತೀರ್ಪು



ಬೆಂಗಳೂರು: ಕೋಲಾರ ಜಿಲ್ಲೆ ಮಾಲೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ವೈ ನಂಜೇಗೌಡ ಅವರ ಆಯ್ಕೆಯನ್ನು ಅಸಿಂಧು ಎಂದು ಮಹತ್ವದ ತೀರ್ಪು ನೀಡಿರುವ ಹೈಕೋರ್ಟ್, ನಾಲ್ಕು ವಾರದೊಳಗೆ ಮರು ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸುವಂತೆ ಸೂಚಿಸಿದೆ. ಅರ್ಜಿದಾರರ ಕೋ–ರಿಕೆಯಂತೆ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಹೈಕೋರ್ಟ್ ತಾನೇ ನೀಡಿದ್ದ ತೀರ್ಪಿಗೆ 30 ದಿನಗಳ ಕಾಲ ತಡೆಯಾಜ್ಞೆ ನೀಡಿದೆ.

ಅಭ್ಯರ್ಥಿಗಳು ಪಡೆದಿದ್ದ ಮತಗಳ ವಿವರ
ಕೆ.ವೈ, ನಂಜೇಗೌಡ (ಕಾಂಗ್ರೆಸ್)– 50,955
ಮಂಜುನಾಥ್ ಗೌಡ (ಬಿಜೆಪಿ)– 50707
ಹೂಡಿ ವಿಜಯ್ ಕುಮಾರ್ (ಪಕ್ಷೇತರ)– 49362
ಜಿ,ಇ ರಾಮೇಗೌಡ (ಜೆಡಿಎಸ್)– 17.627
ಗೆಲುವಿನ ಅಂತರ 248

ಹೈಕೋರ್ಟ್ ಆದೇಶವನ್ನು ಪ್ರಶ್ನೆಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸಿಲು ಅವಕಾಶ ನೀಡಬೇಕು. ಹೀಗಾಗಿ ಆದೇಶಕ್ಕೆ ತಡೆಯಾಜ್ಞೆ ನೀಡಬೇಕು ಎಂದು ನಂಜೇಗೌಡ ಪರ ವಕೀಲರಾದ ನಳೀನ ಮಾಯಾಗೌಡ ಅವರು ನ್ಯಾಯಾಧೀಶರಿಗೆ ಮನವಿ ಮಾಡಿಕೊಂಡರು. ಇದನ್ನು ನ್ಯಾಯಮೂರ್ತಿಗಳು ಮಾನ್ಯ ಮಾಡಿದರು.

ಕೆವೈ ನಂಜೇಗೌಡ ಆಯ್ಕೆ ವಿರುದ್ಧ ಪರಾಜಿತ ಬಿಜೆಪಿ ಅಭ್ಯರ್ಥಿ ಕೆಎಸ್ ಮಂಜುನಾಥಗೌಡ ಹೈಕೋರ್ಟ್ ಮೆಟ್ಟಿಲೇರಿದ್ದರು. ಮತಎಣಿಕೆಯಲ್ಲಿ ಲೋಪವಾಗಿದ್ದು, ಮತ್ತೊಮ್ಮೆ ಮರು ಮತಎಣಿಕೆಗೆ ಆದೇಶ ನೀಡುವಂತೆ ಮನವಿ ಮಾಡಿದ್ದರು.ಈ ಬಗ್ಗೆ ಸುದೀರ್ಘ ವಿಚಾರಣೆ ನಡೆಸಿದ ಹೈಕೋರ್ಟ್,ಏಕಸದಸ್ಯ ಪೀಠದ ನ್ಯಾಯಮೂರ್ತಿ ಆರ್ ದೇವದಾಸ್ ಅವರು, ಮಂಗಳವಾರ ತೀರ್ಪು ಪ್ರಕಟಿಸಿದರು.
ಹೊಸದಾಗಿ ಮರು ಮತಎಣಿಕೆ ನಡೆಸಲು ಹೈಕೋರ್ಟ್ ಆದೇಶ ನೀಡಿದ್ದು, ನಾಲ್ಕು ವಾರದಲ್ಲಿ ಮರು ಮತ ಎಣಿಕೆ ಮಾಡುವಂತೆ ಸೂಚಿಸಿದೆ. ಜಿಲ್ಲಾ ಚುನಾವಣಾ ಅಧಿಕಾರಿ ಮತ ಎಣಿಕೆಯ ವಿಡಿಯೋ ಸಲ್ಲಿಸಿಲ್ಲ. ಹೀಗಾಗಿ .ಜಿಲ್ಲಾ ಚುನಾವಣಾಧಿಕಾರಿ ವಿರುದ್ಧ ಕ್ರಮಕ್ಕೆ ಸೂಚನೆ ನೀಡಲಾಗಿದೆ. ಬಿಜೆಪಿ ಅಭ್ಯರ್ಥಿ ಮಂಜುನಾಥ್ ಗೌಡ ಹೈಕೋರ್ಟ್ ಮೆಟ್ಟಿಲೇರಿದ್ದರು.
ಕಳೆದ 2023 ರ ವಿಧಾನಸಭಾ ಚುನಾವಣೆಯಲ್ಲಿ ಮಾಲೂರು ವಿಧಾನಸಭಾ ಕ್ಷೇತ್ರದಿಂದ ಗೆದ್ದಿದ್ದ ನಂಜೇಗೌಡ ಅವರ ಮತ ಎಣಿಕೆ ಕಾನೂನು ಪ್ರಕರವಾಗಿ ನಡೆದಿಲ್ಲ ಎಂದು ಪರಾಜಿತ ಅಭ್ಯರ್ಥಿ ಮಂಜುನಾಥ್ ಗೌಡ ಅವರು ಕಾನೂನು ಹೋರಾಟ ನಡೆಸಿದ್ದರು.

ಕಳೆದ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಕೋಲಾರದ ಮಾಲೂರು ಕ್ಷೇತ್ರದಿಂದ ಕಾಂಗ್ರೆಸ್ ಶಾಸಕರಾಗಿ ಕೆ ವೈ ನಂಜೇಗೌಡ ಆಯ್ಕೆಯಾಗಿರುವುದನ್ನು ಅನೂರ್ಜಿತಗೊಳಿಸಬೇಕು ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿ ಸಂಬಂಧ ಪ್ರತಿವಾದಿಗಳಿಗೆ ಹ್ಯಾಂಡ್ ಸಮನ್ಸ್ ನೀಡಲು ಅರ್ಜಿದಾರರಿಗೆ ಹೈಕೋರ್ಟ್ ಅನುಮತಿಸಿತ್ತು.
ಬೆಂಗಳೂರು: 'ಮಾಲೂರು ವಿಧಾನಸಭಾ ಕ್ಷೇತ್ರದ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆ ವೇಳೆ ವಿ.ವಿ ಪ್ಯಾಟ್ ಪೇಪರ್ ಟ್ರಯಲ್ ಅನ್ನು ಇವಿಎಂ ಜೊತೆಗೆ ಹೊಂದಾಣಿಕೆ ಮಾಡುವ ಚಿತ್ರೀಕರಣದ ದೃಶ್ಯಾವಳಿಯನ್ನು ಕೋರ್ಟ್‌ಗೆ ಸಲ್ಲಿಸಿ' ಎಂದು ಹೈಕೋರ್ಟ್, ಕೋಲಾರ ಜಿಲ್ಲಾಧಿಕಾರಿಗೆ ನಿರ್ದೇಶಿಸಿತ್ತು.

ವಿಚಾರಣೆ ವೇಳೆ ಕೇಂದ್ರ ಚುನಾವಣಾ ಆಯೋಗದ ಪರವಾಗಿ ವಕೀಲ ಶರತ್ ಆರ್.ದೊಡವಾಡ ಅವರು ಹಾಜರಾಗಿ, 'ಮತ ಎಣಿಕೆ ವೇಳೆ ವಿ.ವಿ ಪ್ಯಾಟ್ ಪೇಪರ್ ಟ್ರಯಲ್ ಅನ್ನು ಇವಿಎಂ ಜೊತೆಗೆ ಹೊಂದಾಣಿಕೆ ಮಾಡುವ ಕಾರ್ಯದ ಚಿತ್ರೀಕರಣ ಮಾಡಲಾಗಿತ್ತು. ಆ ದೃಶ್ಯಾವಳಿಯನ್ನು ಒಳಗೊಂಡ ಒಂದು ಸಿ.ಡಿಯನ್ನು ಈಗಾಗಲೇ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ' ಎಂದು ಮಾಹಿತಿ ನೀಡಿದ್ದರು.
'ನ್ಯಾಯಾಲಯದ ಅನುಮತಿ ಮೇರೆಗೆ ಇವಿಎಂ ಇರಿಸಲಾಗಿದ್ದ ಸ್ಟ್ರಾಂಗ್ ರೂಂ ಅನ್ನು ತೆರೆದು ಪರಿಶೀಲಿಸಲಾಗಿದೆ. ಅಲ್ಲಿ ವಿ.ವಿ ಪ್ಯಾಟ್ ಪೇಪರ್ ಟ್ರಯಲ್ ಮತ್ತು ಇವಿಎಂ ಯಂತ್ರ ಹೊಂದಾಣಿಕೆ ಕಾರ್ಯದ ಚಿತ್ರೀಕರಣ ನಡೆಸಿದ ದೃಶ್ಯಾವಳಿಗಳನ್ನು ಒಳಗೊಂಡ ಮೂರು ಸಿ.ಡಿಗಳು ಲಭ್ಯವಾಗಿವೆ. ಮತ ಎಣಿಕೆ ವೇಳೆ ಅಭ್ಯರ್ಥಿಗಳ ಏಜೆಂಟರಿಗೆ ನೀಡಲಾಗಿದ್ದ ಫಾರಂ ನಂ.17(ಸಿ) ನಕಲು ಪ್ರತಿಯೂ ಲಭ್ಯವಾಗಿದೆ. ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಇನ್ನಷ್ಟು ಸಮಯ ನೀಡಬೇಕು' ಎಂದು ಕೋರಿದ್ದರು.

ವಿಚಾರಣೆ ವೇಳೆ ಅರ್ಜಿದಾರ ಪರ ಹಿರಿಯ ವಕೀಲರು, ಅರ್ಜಿಯಲ್ಲಿ ಶಾಸಕ ಕೆ ವೈ ನಂಜೇಗೌಡ ಮತ್ತು ಚುನಾವಣೆಗೆ ಸ್ಪರ್ಧಿಸಿದ್ದ ಇತರೆ 13 ಮಂದಿ ಪ್ರತಿವಾದಿಗಳಿದ್ದಾರೆ. ಆ ಪೈಕಿ ಅನೇಕ ಪ್ರತಿವಾದಿಗಳಿಗೆ ಅರ್ಜಿ ಸಂಬಂಧ ಈ ಹಿಂದೆ ಹೈಕೋರ್ಟ್ ಜಾರಿ ಮಾಡಿದ್ದ ನೋಟಿಸ್/ಸಮನ್ಸ್ ತಲುಪಿಲ್ಲ. ಅದರಂತೆ ಪ್ರತಿವಾದಿಗಳಿಗೆ ನೋಟಿಸ್/ಹ್ಯಾಂಡ್ ಸಮನ್ಸ್ ಜಾರಿ ನೀಡಲು ಅನುಮತಿಸಬೇಕು ಎಂದು ಮನವಿ ಮಾಡಿದ್ದರು. ವಿಧಾನಸಭೆ ಚುನಾವಣೆಯಲ್ಲಿ ಮಾಲೂರು ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಕೆ ವೈ ನಂಜೇಗೌಡ ಗೆಲುವು ಸಾಧಿಸಿದ್ದರು.

## ವಿಶ್ವದ ಅತಿದೊಡ್ಡ IMECE ಇಂಡಿಯಾ ಸಮಾವೇಶ ಯಶಸ್ವಿ





ಬೆಂಗಳೂರು: ಅಮೇರಿಕನ್ ಸೊಸೈಟಿ ಆಫ್ ಮೆಕ್ಯಾನಿಕಲ್ ಎಂಜಿನಿಯರ್ಸ್ (ASME) ಮೊದಲ ಬಾರಿಗೆ ಆಯೋಜಿಸಿದ್ದ ವಿಶ್ವದ ಅತಿದೊಡ್ಡ ಮೆಕ್ಯಾನಿಕಲ್ ಎಂಜಿನಿಯರಿಂಗ್ ಕಾಂಗ್ರೆಸ್, ಅಂತಾರಾಷ್ಟ್ರೀಯ ಮೆಕ್ಯಾನಿಕಲ್ ಎಂಜಿನಿಯರಿಂಗ್ ಕಾಂಗ್ರೆಸ್ ಮತ್ತು ಎಕ್ಸ್‌ಪೋಸಿಷನ್ (IMECE) ಇಂಡಿಯಾ 2025 ಯಶಸ್ವಿಗೊಂಡಿದೆ. ಈ ಕಾರ್ಯಕ್ರಮವು ಚಿಂತನೆಗೆ ಹಚ್ಚುವ ಪ್ರಮುಖ ಭಾಷಣಗಳು, ನೀತಿ ಸಂವಾದಗಳೊಂದಿಗೆ ಎಂಜಿನಿಯರಿಂಗ್ ಮತ್ತು ನಾವೀನ್ಯತೆಯಲ್ಲಿ ಭಾರತದ ನಾಯಕತ್ವವನ್ನು ಎತ್ತಿ ತೋರಿಸಿದೆ.

ಈ ಕಾರ್ಯಕ್ರಮವು ಸಂಶೋಧನೆ, ಶಿಕ್ಷಣ ಮತ್ತು ಮುಂದುವರಿದ ಉತ್ಪಾದನೆಯಲ್ಲಿ ಸಹಯೋಗವನ್ನು ಬಲಪಡಿಸುವ ಗುರಿಯನ್ನು ಹೊಂದಿರುವ ಂಖಒಇ ಮತ್ತು ICT ಅಕಾಡೆಮಿ ಆಫ್ ಕೇರಳದ ನಡುವಿನ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿತು. ಆಂಧ್ರಪ್ರದೇಶ ಸರ್ಕಾರದ ಒಖಒಇ ಸಚಿವ ಶ್ರೀನಿವಾಸ್ ಕೊಂಡಪಲ್ಲಿ ಮಾತನಾಡಿ, ಮೆಕ್ಯಾನಿಕಲ್ ಇಂಜಿನಿಯರ್ಸ್ ಸಮಾವೇಶವು ಇಡೀ ದೇಶದಲ್ಲಿ ಇಂಜಿನಿಯರ್ಸ್‌ಗಳಿಗೆ ಇರುವ ಅವಕಾಶಗಳ ಬಗ್ಗೆ ಎತ್ತಿ ಹಿಡಿಯುತ್ತದೆ. ಮೂಲಸೌಕರ್ಯ, ವಲಯ ಉದ್ಯಾನವನ ಮತ್ತು ನಾವೀನ್ಯತೆ ಕೇಂದ್ರಗಳನ್ನು ಹೊಂದಿರುವ ಆಂಧ್ರಪ್ರದೇಶವು ಉತ್ಪಾದನೆ, ಒಖಒಇ ಗಳು ಮತ್ತು ರಫ್ತುಗಳಿಗೆ ಕೇಂದ್ರವಾಗಿ ವೇಗವಾಗಿ ಹೊರಹೊಮ್ಮುತ್ತಿದೆ ? ಭಾರತದ ಒಟ್ಟು ರಫ್ತಿಗೆ ಸುಮಾರು 8% ಕೊಡುಗೆ ನೀಡುತ್ತದೆ. ಭವಿಷ್ಯದ ನೀತಿಗಳು, ಹೂಡಿಕೆ–ಸಿದ್ಧ ಕೈಗಾರಿಕಾ ನೋಡ್‌ಗಳು ಮತ್ತು ಸುಸ್ಥಿರತೆಯ ಮೇಲೆ ಕೇಂದ್ರೀಕರಿಸುವ ಮೂಲಕ, ರಾಜ್ಯವು ಕೈಗಾರಿಕೆಗಳು ಮತ್ತು ನವೋದ್ಯಮಗಳಿಗೆ ಅಭೂತಪೂರ್ವ ಅವಕಾಶಗಳನ್ನು ಸೃಷ್ಟಿಸುತ್ತಿದೆ. IMECE ಭಾರತವು ಜಾಗತಿಕ ಸಹಯೋಗಗಳನ್ನು ಸಕ್ರಿಯಗೊಳಿಸುವ ಮೂಲಕ, ಎಂಜಿನಿಯರಿಂಗ್ ಸಂಶೋಧನೆಯನ್ನು ಮುಂದುವರೆಸುವ ಮೂಲಕ ಮತ್ತು ಭಾರತವನ್ನು ನಾವೀನ್ಯತೆ–ಚಾಲಿತ ಆರ್ಥಿಕತೆಯಾಗಿ ಮರುಕಲ್ಪಿಸಲು ಶೈಕ್ಷಣಿಕ–ಉದ್ಯಮ ಪಾಲುದಾರಿಕೆಗಳನ್ನು ಬಲಪಡಿಸುವ ಮೂಲಕ ಈ ದೃಷ್ಟಿಕೋನವನ್ನು ಸಂಪೂರ್ಣವಾಗಿ ಪೂರೈಸುತ್ತದೆ. ಒಟ್ಟಾಗಿ, ಭಾರತವು ಸುಸ್ಥಿರ ನಾವೀನ್ಯತೆ ಮತ್ತು ಕೈಗಾರಿಕಾ ಬೆಳವಣಿಗೆಯಲ್ಲಿ ಜಗತ್ತನ್ನು ಮುನ್ನಡೆಸುವ ಭವಿಷ್ಯಕ್ಕಾಗಿ ನಾವು ಅಡಿಪಾಯ ಹಾಕುತ್ತಿದ್ದೇವೆ." ಸ್ಕೈರೂಟ್ ಏರೋಸ್ಪೇಸ್‌ನ ಸಹ–ಸಂಸ್ಥಾಪಕರಾದ ಶ್ರೀ ಪವನ್ ಕುಮಾರ್ ಚಂದನ, IMECE 2025 ರಲ್ಲಿನ ತಮ್ಮ ಅನುಭವದಿಂದ ಸಂತೋಷಗೊಂಡಿದ್ದಾರೆ, "ಭಾರತ ಇನ್ನು ಮುಂದೆ ಕೇವಲ ಸುಧಾರಿತ ತಂತ್ರಜ್ಞಾನಗಳ ಗ್ರಾಹಕರಲ್ಲ ನಾವು ಈಗ ವಿಶ್ವ ದರ್ಜೆಯ ಆಳವಾದ ತಂತ್ರಜ್ಞಾನವನ್ನು ನಿರ್ಮಿಸುತ್ತಿದ್ದೇವೆ ಮತ್ತು ಜಗತ್ತಿಗೆ ರಫ್ತು ಮಾಡುತ್ತಿದ್ದೇವೆ.

## ಜಾತಿ ಗಣತಿಗೂ ಮುನ್ನ ಒಗ್ಗೂಡಲು ಮುಂದಾದ ಪ್ರಬಲ ಸಮುದಾಯಗಳು

ಬೆಂಗಳೂರು: ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮೂಲಕ ಸೆ.22ರಿಂದ ನಡೆಸಲಾಗುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ಸಿದ್ಧತೆ ಒಂದೆಡೆ ಸಾಗಿದ್ದರೆ, ಮತ್ತೊಂದೆಡೆ ಪ್ರಬಲ ಸಮುದಾಯಗಳಲ್ಲಿ ತಳಮಳವನ್ನುಂಟು ಮಾಡಿದೆ. ಇದರಿಂದ ಜಾತಿ, ಉಪ ಜಾತಿಗಳನ್ನು ಒಗ್ಗೂಡಿಸಿ ಪ್ರಮುಖ ಜಾತಿಯಡಿ ಗುರುತಿಸಿಕೊಳ್ಳುವ ಪ್ರಯತ್ನ ಬಿರುಸಾಗಿದೆ.

ಪ್ರಮುಖ ಜಾತಿಗಳು ಉಪ ಜಾತಿಗಳನ್ನು ಒಗ್ಗೂಡಿಸಿ ಒಂದೇ ಜಾತಿಯಡಿ ತರಲು ಹರ ಸಾಹಸ ಪಡಲಾಗುತ್ತಿದೆ?. ಪ್ರಬಲ ಜಾತಿಗಳಲ್ಲಿನ ಹಲವು ಉಪ ಜಾತಿ ಹಾಗೂ ಪಂಗಡಗಳು ಆಯೋಗ ಬಿಡುಗಡೆ ಮಾಡಿರುವ ಜಾತಿವಾರು ಪಟ್ಟಿಯಲ್ಲಿ ಸೇರಿವೆ. ಒಂದು ವೇಳೆ ಅವು ಸ್ವತಂತ್ರ ಜಾತಿಗಳನ್ನಾಗಿ ಸಮೀಕ್ಷೆ ವೇಳೆ ದಾಖಲಿಸಿದರೆ, ಒಗ್ಗೂಡ ಬೇಕಾದ ಸಮುದಾಯಗಳು ಹರಿದು ಹಂಚಿ ಹೋಗಲಿವೆ. ಇದರಿಂದ ಸಂಖ್ಯಾಬಲದಲ್ಲಿ ಹೆಚ್ಚಿರಬೇಕಾದ ಜಾತಿಗಳು ಸಣ್ಣ, ಸಣ್ಣ ಜಾತಿಗಳಾಗಿ ಗುರುತಿಸಿಕೊಳ್ಳಬೇಕಾಗುತ್ತದೆ




ಎಂಬ ಆತಂಕ ಎದುರಾಗಿದೆ.

ಅಲ್ಲದೆ, ಸರ್ಕಾರದ ಮೀಸಲಾತಿ, ಯೋಜನೆ, ಕಲ್ಯಾಣ ಕಾರ್ಯಕ್ರಗಳಲ್ಲಿ ನಿರೀಕ್ಷಿತ ಪ್ರಯೋಜನ ದೊರೆಯದಿರಬಹದು ಎಂಬ ಲೆಕ್ಕಾಚಾರವನ್ನು ಆಯಾ ಜಾತಿಯ ಪ್ರಮುಖರು ಮಾಡತೊಡಗಿದ್ದಾರೆ. ತಮ ತಮ ಜಾತಿಗಳಿಗೆ ಯಾವುದೇ ಕಾರಣ–ಕ್ಕೂ ಅನ್ಯಾಯವಾಗದಂತೆ ಎಚ್ಚರ ವಹಿಸಲು ಟೊಂಕ ಕಟ್ಟಿ ನಿಂತಿದ್ದಾರೆ. ಜಾತಿ ಗಣತಿಗೂ ಮುನ್ನ ಎಚ್ಚೆತ್ತಿರುವ ಪ್ರಮುಖ ಸಮುದಾಯಗಳು ಸಮೀಕ್ಷೆ ಸಂದರ್ಭದಲ್ಲಿ ಎಚ್ಚರ ವಹಿಸುವಂತೆ ನಿರಂತರವಾಗಿ ತಿಳುವಳಿಕೆ ನೀಡುತ್ತಿವೆ. ಇದು ಆಯೋಗ ನಡೆಸುವ ಸಮೀಕ್ಷೆಗೂ ಸಹಕಾರಿಯಾಗಲಿದೆ.

ಒಂದು ವೇಳೆ ಸಮೀಕ್ಷೆಯ ನಂತರ ಸಂಖ್ಯಾಬಲದಲ್ಲಿ ಇಳಿಕೆಯಾದರೆ, ರಾಜಕೀಯದ ಮೇಲೂ ಪರಿಣಾಮ ಬೀರಬಹುದೆಂಬ ಆತಂಕ ಕಾಡತೊಡಗಿದ್ದು, ಆಯಾ ಸಮುದಾಯಗಳ ಪ್ರಮುಖರು, ಸಂಘಗಳು, ಮಠಾಧೀಶರು ತಮ ತಮ ಸಮುದಾಯಗಳ ಹಿತ ಕಾಪಾಡಲು ಮುಂದಾಗಿದ್ದಾರೆ. ಪ್ರಮುಖವಾದ ಒಂದೇ ಜಾತಿಯಡಿ ಎಲ್ಲರನ್ನೂ ಒಗ್ಗೂಡಿಸಲು ನಿರಂತರ ಪ್ರಯತ್ನ ಮಾಡುತ್ತಿದ್ದಾರೆ.
ಜಿಲ್ಲೆ, ತಾಲ್ಲೂಕು, ಹೋಬಳಿ, ಪಟ್ಟಣ ಮಟ್ಟದಲ್ಲಿ ಸಭೆ, ಸಮಾರಂಭಗಳನ್ನು ನಡೆಸುವ ಮೂಲಕ ತಮ ಜನಾಂಗದವರಿಗೆ ಜಾತಿ ಗಣತಿ ಕುರಿತು ಸೂಕ್ತ ಮಾಹಿತಿ ನೀಡಿ ಅರಿವು ಮೂಡಿಸಲಾಗುತ್ತಿದೆ. ಸಮೀಕ್ಷೆ ಸಂದರ್ಭದಲ್ಲಿ ವಾಸ್ತವ ಮಾಹಿತಿಯನ್ನು ಮಾತ್ರ ನೀಡಬೇಕು ಎಂದು ಮನವಿ ಮಾಡಲಾಗುತ್ತಿದೆ.

ಸಮೀಕ್ಷೆ ಆರಂಭಕ್ಕೂ ಮುನ್ನ ಏನೆಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂಬ ಕುರಿತು ವಿವಿಧ ಮಾಧ್ಯಮಗಳ ಮೂಲಕ ಅದರಲ್ಲೂ ಸಾಮಾಜಿ–ಕ ಮಾಧ್ಯಮಗಳ ಮೂಲಕ ಹೆಚ್ಚು ಜಾಗೃತಿ ಮೂಡಿಸಲಾಗುತ್ತಿದೆ.

## ಕೀರ್ತಿಶೇಷ ಎಸ್. ಎಂ. ನಂಜುಂಡಪ್ಪನವರ ಸಂಸ್ಮರಣೆ ಹಾಗೂ ಗ್ರಾಮಾಂತರ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ವಿತರಣೆ

ಬೆಂಗಳೂರು: ಕೀರ್ತಿಶೇಷ.ಎಸ್. ಎಂ. ನಂಜುಂಡಪ್ಪನವರು ಶಿವಾಚಾರ ನಗರ್ತರೆಂದರೆ ಕುಬೇರ ಕುಲದವರೆಂದೇ ಹೆಸರಾದವರು, ಕೇವಲ ಹೆಸರಿಗಷ್ಟೇ ಅಲ್ಲದೆ ಆಸ್ತಿ–ಪಾಸ್ತಿ, ಒಡವೆ –ವಸ್ತ್ರ, ಧನ–ದ್ರವ್ಯ ವ್ಯಾಪಾರ–ವಹಿವಾಟು, ವರಮಾನ ವಿದ್ಯಾಮಾನಗಳಲ್ಲಿಯೂ ಮೇಲುಗೈ ಸಾಧಿಸಿ, ಜನಾಂಗದ ಹಿರಿಮೆಯನ್ನು ಹೆಚ್ಚಿಸುವಲ್ಲಿ ಪಾತ್ರರಾದವರು ಎಂದು ಎ.ಎಸ್.ವಿ.ಎನ್.ವಿ. ಸಂಘದ ಅಧ್ಯಕ್ಷರಾದ ಎಸ್. ಪ್ರಕಾಶ್ ರವರು ತಿಳಿಸಿದರು.

ಎಸ್. ಎಂ. ನಂಜುಂಡಪ್ಪ ಧರ್ಮ ಸಂಸ್ಥೆ (ರಿ), ಬೆಂಗಳೂರು, ಹಾಗೂ ಎ.ಎಸ್.ವಿ. ಎನ್.ವಿ. ಸಂಘದ ಸಹಕಾರದೊಂದಿಗೆ, ಕೀರ್ತಿಶೇಷ ಎಸ್. ಎಂ. ನಂಜುಂಡಪ್ಪ ರವರ 77ನೇ ಸಂಸ್ಮರಣಾ ಮಹೋತ್ಸವವನ್ನು ಶ್ರದ್ಧಾಪೂರ್ವಕವಾಗಿ ಆಚರಿಸಿದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು*
ಈ ಸಂದರ್ಭದಲ್ಲಿ ರಾಜಾಜಿನಗರ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗದ ಉಪನ್ಯಾಸಕರಾದ ಪ್ರೊ.ಶೋಭಾ ಪಿ.ರವರು ಮಾತನಾಡಿ "ವ್ಯಕ್ತಿವಿಕಾಸ" ವಿಷಯವಾಗಿ ಶಿಕ್ಷಣವು ಜಗತ್ತನ್ನು ಬದಲಾಯಿಸುವ ಮಹತ್ವದ ಸಾಧನವಾಗಿದೆ ಕಲಿಕೆ ಶಿಶುವಿನಿಂದ



ಹಿಡಿದು ಅಂತಿಮ ಶ್ವಾಸದವರೆಗೆ ನಡೆಯುವ ನಿರಂತರ ಪ್ರಕ್ರಿಯೆ ಎಂಬುದಾಗಿ ಉಪನ್ಯಾಸದಲ್ಲಿ ತಿಳಿಸುತ್ತಾ ಪ್ರತಿಯೊಬ್ಬರು ಸಮಯ ನಿರ್ವಹಣೆ, ಹಣ ನಿರ್ವಹಣೆ, ಧನಾತ್ಮಕ ಚಿಂತನೆ, ಕ್ಷಮಾ ಗುಣ, ಸರಳ ಬದುಕು, ಮೈಗೂಡಿಸಿಕೊಳ್ಳಬೇಕು ಎಂದು ಕರೆಕೊಟ್ಟರು.

ಮಹಾದಾನಿಗಳಾದ ಶ್ರೀ ಎಸ್. ಎಂ. ನಂಜುಂಡಪ್ಪನವರ ಮರಣ ಶಾಸನದ ಮಾರ್ಗ ದರ್ಶನದಂತೆ ಸಂಸ್ಥೆಯ ಧರ್ಮದರ್ಶಿಗಳು ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾ
ಬಂದಿರುತ್ತಾರೆ. ಧರ್ಮ ಸಂಸ್ಥೆಯಲ್ಲಿ ಸದ್ಯಕ್ಕೆ ಸುಮಾರು 37 ಲಕ್ಷ ರೂಪಾಯಿ ಮೂಲ ಬಂಡವಾಳವಿರುತ್ತದೆ. ಅದರಲ್ಲಿ ಬರುವ ಬಡ್ಡಿಯ ಹಣದಿಂದ ವಿದ್ಯಾರ್ಥಿನಿಯರಿಗೆ ಪ್ರಸಾದ ವ್ಯವಸ್ಥೆಗಾಗಿ ಖರ್ಚು ಮಾಡುತ್ತಿದ್ದೇವೆ. ಸಂಸ್ಥಾಪನಾ ದಿನಾಚರಣೆ ಅಂಗವಾಗಿ ದೇವಾಲಯಗಳಲ್ಲಿ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿದ್ದೇವೆ. ಈ ಖರ್ಚುಗಳು ಹಾಗೂ ಉಳಿದ ಹಣವನ್ನು ಮೂಲಧನಕ್ಕೆ ಸೇರಿಸಲಾಗುತ್ತಿದೆ.

ಶ್ರೀಮತಿ ಭದ್ರಮ್ಮ – ಶ್ರೀ ನಂಜುಂಡಪ್ಪ ಧರ್ಮಸಂಸ್ಥೆ ಯವರು 5 ಲಕ್ಷದ ರೂ.ಗಳನ್ನು ನಮ್ಮ ಸಂಸ್ಥೆಯಲ್ಲಿ ಶಾಶ್ವತ ಪುದುವಟುನ್ನು ಇಟ್ಟಿರುತ್ತಾರೆ.ಆ ಮೊಬಲಗಿನಿಂದ ಬರುವ ಉತ್ಪತ್ತಿಯ ಹಣದಿಂದ ಅವರು ಪತ್ರದಲ್ಲಿ ತಿಳಿಸಿರುವಂತೆ ಗ್ರಾಮಾಂತರ ಪ್ರದೇಶದಲ್ಲಿ ಎಸ್.ಎಸ್.ಎಲ್.ಸಿ/ಪಿ.ಯು.ಸಿ. ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿನಿಯರಿಗೆ 2014ರಿಂದ ಸತತವಾಗಿ 15 ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.
ಇದರ ಜೊತೆಗೆ ವಿಜಯಪುರದ ನಿವಾಸಿಯಾಗಿದ್ದ ಅಂ.ಚಿಕ್ಕಮುನಿಯಪ್ಪ ನವರ ಧರ್ಮಪತ್ನಿ ಲಿಂ.ಚಿಕ್ಕರುದ್ರಮ್ಮ ನವರ ಹೆಸರಿನಲ್ಲಿ ಶ್ರೀಮತಿ ಚಿಕ್ಕರುದ್ರಮ್ಮ ಧರ್ಮಸಂಸ್ಥೆ 5 ಲಕ್ಷ ರೂ.ಗಳನ್ನು ನಮ್ಮ ಸಂಸ್ಥೆಯಲ್ಲಿ ಶಾಶ್ವತ ಪುದುವಟುನ್ನು ಇಟ್ಟಿರುತ್ತಾರೆ. ಆ ಮೊಬಲಗಿನಿಂದ ಬರುವ ಬಡ್ಡಿ ಹಣದಿಂದ ಅವರು ಪತ್ರದಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ವಿಜಯಪುರದ ಸ್ಥಳೀಯರಾಗಿದ್ದು ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ 15 ಪ್ರತಿಭಾ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ನೀಡಲು ತಿಳಿಸಿರುತ್ತಾರೆ.

ಎಸ್.ಎಂ.ನಂಜುಂಡಪ್ಪನವರ ಅಮೃತ ಮಹೋತ್ಸವ ಅಂಗವಾಗಿ ಮಾತೃ ಸಂಸ್ಥೆಯ ವಿದ್ಯಾರ್ಥಿ ನಿಲಯದ ಸ್ಪಂದನ ವಿದ್ಯಾರ್ಥಿ ಸಂಘಕ್ಕೆ ಅಂತರ ವಿದ್ಯಾರ್ಥಿ
ನಿಲಯಗಳ ಕನ್ನಡ ಚರ್ಚಾ ಸ್ಪರ್ಧೆಗೆ ಪರ್ಯಾಯ ಪಾರಿತೋಷಕ 2009 – 10ನೇ ಸಾಲಿನಲ್ಲಿ ನೀಡಲಾಗಿದೆ ಎಂದು ಕೆ.ಸಿ.ಜಯಕುಮಾರ್ ರವರು ತಿಳಿಸಿದರು. ಈ ಸಂದರ್ಭದಲ್ಲಿ ಧರ್ಮದರ್ಶಿಗಳಾದ ಶ್ರೀ ಕೆ. ಸಿ. ಜಯಕುಮಾರ್, ಅಧ್ಯಕ್ಷರು ಶ್ರೀ ನಾ.ಮಲ್ಲಿಕಾರ್ಜುನ, ಗೌ?? ಕಾರ್ಯದರ್ಶಿ ಶ್ರೀ ಎ.ಬಿ.ಶಿವಸುಬ್ರಹ್ಮಣ್ಯಂ, ಶ್ರೀ ಬಿ.ಆರ್.ಸೋಮಶೇಖರ್, ಶ್ರೀ ಎಸ್. ಮಂಜುನಾಥ್, ಶ್ರೀ ಬಿ.ಕುಮಾರ್, ನಾಮನಿಮಿತ್ತ ಧರ್ಮದರ್ಶಿ, ಶ್ರೀ ಎಂ. ಎಸ್.ಕೃಷ್ಣಮೂರ್ತಿ, ಗೌ.ಕಾರ್ಯದರ್ಶಿ, ಎ. ಎಸ್.ವಿ.ಎನ್.ವಿ.ಸಂಘ, ಬೆಂಗಳೂರು ಸೇರಿದಂತೆ ಇತರರು ಇದ್ದರು.

ಡಿಜಿಟಲ್ ವಾರ್ತೆ

# ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪತಾಂತ್ರಿಕ ಮಹಾವಿದ್ಯಾಲಯದಲ್ಲಿ ನವಸಂಗಮ ಕಾರ್ಯಕ್ರಮ

ಬಳ್ಳಾರಿ: ಇಂಗ್ಲೀಷ್ ವರ್ಣಮಾಲೆಯ–ಸಿ ಎನ್ನುವ ಪದ, 3ಸಿಗಳು ನೆನಪಿಡಬೇಕು, ಮೊದಲನೆಯ ಸಿ–ಕಂಪೀಟೇಷನ್ ಎರಡನೆಯ ಸಿ – ಕಲ್ಚರ್, ಮೂರನೇ ಸಿ– ಕಾನ್ಫಿಡೆನ್ಸ್ , ಅಂದರೇ ನಿಮ್ಮ ವೃತ್ತಿಪರ ಬೆಳವಣಿಗೆ ಮತ್ತು ನಿಮ್ಮ ಭವಿಷ್ಯದ ವೃತ್ತಿಜೀವನ ಮತ್ತು ಭವಿಷ್ಯದ ಜೀವನದಲ್ಲಿ ಯಶಸ್ಸಿಗೆ ಸಾಮರ್ಥ್ಯ,ಸಂಸ್ಕೃತಿ, ಆತ್ಮವಿಶ್ವಾಸ ಅಗತ್ಯವಿದೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಬೆಳಗಾವಿ, ಡಾ.ವಿನಾಯಕಸಿಂಗ್.ಎಸ್.ರಜಪೂತ್, ತಿಳಿಸಿದರು.




ಅವರು ಇತ್ತೀಚಿಗೆ ಆರ್. ವೈ.ಎಂ.ಇ.ಸಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ನವಸಂಗಮ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ, ಮೊದಲನೆಯದು ಸಾಮಥ–ರ್ಥ್ಯ ಇದು ಸ್ಪರ್ಧಾತ್ಮಕ ಜಗತ್ತು. ಮಾಹಿತಿಯನ್ನು ಓದುವುದು, ಅಧ್ಯಯನ ಮಾಡುವುದು ಮತ್ತು ಅರ್ಥಮಾಡಿಕೊಳ್ಳುವುದು ಸಾಮರ್ಥ್ಯಕ್ಕೆ ಹೇಗೆ ನೀಡುವುದು. ವಾಸ್ತವ ಮತ್ತು ಪ್ರಾಯೋಗಿಕತೆಯನ್ನು ಸೃಷ್ಟಿಸಲು ನಿಮ್ಮ ಎಂಜಿನಿಯರಿಂಗ ಜ್ಞಾನವನ್ನು ಅನ್ವಯಿಸಿ. ಪಡೆದ ಮಾಹಿತಿಯನ್ನು ಜ್ಞಾನ ಎಂದು ಕರೆಯಲಾಗುತ್ತದೆ. ನಿಮಗೆ ತಾಂತ್ರಿಕ ಜ್ಞಾನ, ಅನ್ವಯಿಕೆ, ಜ್ಞಾನ ಮಾಹಿತಿ ಯಾವಾಗಲೂ ಇದ್ದರೆ, ನಂತರ ನೀವು ಖಂಡಿತವಾಗಿಯೂ ಈ ಜಗತ್ತಿನಲ್ಲಿ ಸ್ಪರ್ಧಿಸಲು ಸಾಧ್ಯವಾಗುತ್ತದೆ.

ಎರಡನೆಯ ಸಿ ಸಂಸ್ಕೃತಿ. ನಾವೀನ್ಯತೆಯ ಸಂಸ್ಕೃತಿ, . ಗುರಿಗಳನ್ನು ಪೂರ್ಣಗೊಳಿಸಲು ಸಂಸ್ಕೃತಿ, ಗೌರವದ ಸಂಸ್ಕೃತಿ. ಹೊಸ ಚಿಂತನೆಗೆ ನಾವೀನ್ಯತೆ ಮತ್ತು ಅನ್ವಯಿಕೆ ಅಗತ್ಯವಿದೆ. ಈಗ, ಪ್ರತಿ ದೇಶವು, ಭಾರತ ಸೇರಿದಂತೆ, ನಾವೀನ್ಯತೆಯನ್ನು ಬಯಸುತ್ತದೆ, ಮುಂದಿನ ಗುರಿಗಳ ಸಂಸ್ಕೃತಿ, ನಿರ್ದಿಷ್ಟ ಸಮಯದ ಚೌಕಟ್ಟಿನಲ್ಲಿ ಕೆಲಸ ಚಟುವಟಿ–ಕೆಗಳನ್ನು ಮಾಡಿ, ಗುರಿಗಳ ಈ ಸಂಸ್ಕೃತಿಯನ್ನು ಪರಿಣಾಮಕಾರಿಯಾಗಿ ಅಭಿವೃದ್ಧಿಪಡಿಸಿ, ಉದಾಹರಣೆಗೆ,ಅಂಕಗಳ ಗುರಿಯನ್ನು ಇರಿಸಿ. ನಿಮ್ಮ ಶಿಕ್ಷಣ, ಅವಧಿಯಿಂದ, ನೀವು ಅಧ್ಯಯನ ಮಾಡುತ್ತಿರುವ ಪ್ರತಿಯೊಂದು ಕೋರ್ಸ್ನಲ್ಲಿ ಅತ್ಯಧಿಕ ಗುರಿಯನ್ನು ಇರಿಸಿ. ಮುಂದಿನ ಸಿ, ಮಾನವರಿಗೆ ಗೌರವದ ಸಂಸ್ಕೃತಿ, ಇದರಲ್ಲಿ ನಿಮ್ಮ ಕುಟುಂಬ,ನಿಮ್ಮ ಹಿರಿಯರು, ನಿಮ್ಮ ಸ್ನೇಹಿತರು, ಕೆಲಸದ ಸ್ಥಳದಲ್ಲಿ ನಿಮ್ಮ ಸಹೋದ್ಯೋಗಿಗಳು ಇತ್ಯಾದಿ ಸೇರಿವೆ.

ಕೊನೆಯ ಸಿ. ಆತ್ಮವಿಶ್ವಾಸಕ್ಕಾಗಿ. ಯಾವುದೇ ಸವಾಲಿನ ಸಂದರ್ಭಗಳನ್ನು ಎದುರಿಸಲು ಈ ಆತ್ಮವಿಶ್ವಾಸ ಅಗತ್ಯ, ಸರಿಯೇ? ನಿಮ್ಮ ಎಂಜಿನಿಯರಿಂಗ್ ಶೈಕ್ಷಣಿಕ ಅವಧಿಯಿಂದ ನಿಮ್ಮ ಯಶಸ್ಸಿನವರೆಗೆ ಎಲ್ಲಾ ಕೆಲಸಗಳಲ್ಲಿ ಆತ್ಮವಿಶ್ವಾಸ ಅಗತ್ಯ, ನಿಮ್ಮ ಭವಿಷ್ಯದ ಜೀವನದಲ್ಲಿ ನೀವು ಅಧಿಕಾರ ವಹಿಸಿಕೊಳ್ಳುತ್ತೀರಿ." ಎಂದು ಕರೆ ನೀಡಿದರು. ವೀ.ವಿ.ಸಂಘದ ಕಾರಯಕಾರಿ ಸಮಿತಿಯ ಸದಸ್ಯರಾದ ಕೋರಿ ವೀರುಪಾಕ್ಷಪ್ಪ, ಈ ಕಾಲೇಜಿನ ಹಳೆಯ ವಿದ್ಯಾರ್ಥಿ ಪ್ರಯಾಣವನ್ನು ಹೇಗೆ ಪ್ರಾರಂಭಿಸಲಾಗಿದೆ ಮತ್ತು ಉದ್ಯಮ ಕ್ಷೇತ್ರಗಳಲ್ಲಿ ಅವರ ಉನ್ನತ ಸ್ಥಾನವನ್ನುತಲುಪಲು ಅದು ಹೇಗೆ ಸಹಾಯ ಮಾಡಿದೆಎಂಬುದರಕುರಿತು ಮಾತನಾಡಿ"ಈ ಸಂಸ್ಥೆಯು ನಾಲ್ಕು ದಶಕಗಳಿಂದ ಕರ್ನಾಟಕರಾಜ್ಯ ಮತ್ತು ನೆರೆಯ ರಾಜ್ಯಗಳಲ್ಲಿ ಅತ್ಯುತ್ತಮ ತಾಂತ್ರಿಕ ಶಿಕ್ಷಣಸಂಸ್ಥೆಯಾಗಿದೆ, ಈ ಇನ್‌ಸ್ಟಿಟ್ಯೂಟ್‌ನಲ್ಲಿ ಲಭ್ಯವಿರುವ ಇತ್ತೀಚಿನ ಸೌಲಭ್ಯಗಳನ್ನು ನಿಮ್ಮ ಅತ್ಯುತ್ತಮವಾಗಿ ಬಳಸಿಕೊಳ್ಳಿ, ನಿಮ್ಮ ಶಿಕ್ಷಣದಲ್ಲಿ ಹಾರುವ ಬಣ್ಣಗಳೊಂದಿಗೆ ಹೊರಬನ್ನಿ, ಎಂಜಿನಿಯರಿಂಗ್‌ನ ಎಲ್ಲಾ ಕ್ಷೇತ್ರಗಳಲ್ಲಿ ಉತ್ತಮ ಅವಕಾಶಗಳಿವೆ, ಈಗ ನೀವು ಜ್ಞಾನಕ್ಕಾಗಿ ನಿಮ್ಮಉತ್ಸಾಹವನ್ನು ವೇಗಗೊಳಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ವೀರಶೈವ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರು, ಹಾಗೂ ಆರ್.ವೈ.ಎಂ.ಇ.ಸಿ.ಯ ಅಧ್ಯಕ್ಷರು, ಜಾನೆಕುಂಟೆ ಬಸವರಾಜ, ಮಾತನಾಡಿ "ಇಂದಿನ ಕಾಲಬದಲಾವಣೆಯ ಕಾಲ, ಕಾಂಪಿಟೇಶನ್ ಯುಗವಾಗಿದೆ, ಈ ಜಗತ್ತಿನಲ್ಲಿ ಉಳಿಸಿಕೊಳ್ಳಲು ನಿಮ್ಮ ತಾಂತ್ರಿಕ ಜ್ಞಾನ ಮತ್ತು ಕೌಶಲ್ಯಗಳನ್ನು ನವೀಕ–ರಿಸಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಪ್ರಾಂಶುಪಾಲರಾದ ಡಾ.ಟಿ.ಹನುಮಂತರೆಡ್ಡಿ ಸ್ವಾಗತಿಸಿದರು, ಕಾರ್ಯಕ್ರಮದಲ್ಲಿ ಡಾ. ಚಿನ್ನಾ.ವಿ.ಗೌಡರು, ಉಮಾದೇವಿ, ಡಾ.ಕೆ.ಆರ್.ಭಾಗ್ಯ ಕಾರ್ಯಕ್ರಮ ನಿರೂಪಿಸಿದರು, ಉಪಪ್ರಾಂಶುಪಾಲರಾದ ಡಾ. ಸವಿತಾ ಸೊನೋಳಿ ವಂದಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ , ವೀರಶೈವ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರು, ಹಾಗೂ ಆರ್.ವೈ.ಎಂ.ಇ.ಸಿ.ಯ ಅಧ್ಯಕ್ಷರು, ಜಾನೆಕುಂಟೆ ಬಸವರಾಜ, ಆರ್.ವೈ.ಎಮ್.ಇ.ಸಿ ಆಡಳಿತ ಮಂಡಳಿಯ ಸದಸ್ಯರಾದ, ಬಾಡದ ಪ್ರಕಾಶ್, ವೀ.ವಿ.ಸಂಘದ ಕಾರ?ಯಕಾರಿ ಸಮಿತಿಯ ಸದಸ್ಯರಾದ ಕೋರಿ ವೀರುಪಾಕ್ಷಪ್ಪ, ಪ್ರಾಂಶುಪಾಲರಾದ ಡಾ.ಟಿ.ಹನುಮಂತರೆಡ್ಡಿ, ಉಪ ಪ್ರಾಂಶುಪಾಲರಾದಡಾ॥ ಟ ಸವಿತಾ ಸೊನೋಳಿ ಸೇರಿದಂತೆ ಮಹಾವಿದ್ಯಾಲಯದ ಶಿಕ್ಷಕ ವೃಂದದವರು, ಸಿಬ್ಬಂದಿವರ್ಗದವರು ವಿದ್ಯಾರ್ಥಿವೃಂದದವರು, ಪೋಷಕರು ಭಾಗವಹಿಸಿದ್ದರು.

## ಸರಕಾರಿ ಪದವಿ ಮಹಾ ವಿದ್ಯಾಲಯಗಳ ವಿದ್ಯಾರ್ಥಿಗಳು

# ಎಬಿವಿಪಿ ನೇತೃತ್ವದಲ್ಲಿ ಪ್ರತಿಭಟನೆ

ಮುದ್ದೇಬಿಹಾಳ: ಕಳೆದ ಒಂದುವರೆ ತಿಂಗಳಿನಿಂದ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳದೆ, ಪಾಠ ಪ್ರವಚನಗಳು ನಡೆಯದೆ ಇರುವುದನ್ನು ಪ್ರತಿಭಟಿಸಿ ಸ್ಥಳೀಯ ಎರಡು ಸರಕಾರಿ ಪದವಿ ಮಹಾ ವಿದ್ಯಾಲಯಗಳ ವಿದ್ಯಾರ್ಥಿಗಳು ಎಬಿವಿಪಿ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನಾ ಮೆರವಣಿಗೆ ನಡೆಸಿ ತಹಸಿಲ್ದಾರ್ ಕಚೇರಿ ಮುಂದುಗಡೆ ಕಪ್ಪು ಹಲಗೆ ಇಟ್ಟು ಪಾಠವನ್ನು ಮಾಡುವ ಮೂಲಕ ತಮಗೆ ಆಗುತ್ತಿರುವ ತೊಂದರೆಯನ್ನು ವ್ಯಕ್ತಪಡಿಸಿದರು.

ರಾಜ್ಯದ ಸರಕಾರಿ ಪದವಿ ಮಹಾ ವಿದ್ಯಾಲಯಗಳಲ್ಲಿ ಅಗಸ್ಟ್ ತಿಂಗಳನಿಂದ ಸರ್ಕಾರ ರಾಜ್ಯದ ಎಲ್ಲಾ ಅತಿಥಿ ಮತ್ತೊಮ್ಮೆ ಹೊಸದಾಗಿ ಕೌನ್ಸಿಲಿಂಗ್ ನಡೆಸಲು ಮುಂದಾಗಿರುವುದನ್ನು ಖಂಡಿಸಿದ ವಿದ್ಯಾರ್ಥಿ ಮುಖಂಡ ಶಿವನಗೌಡ ಬಿರಾದಾರ, ರಾಜ್ಯ ಸರ್ಕಾರ ಶೇ 70 ಇರುವ ಅತಿಥಿ ಉಪನ್ಯಾಸಕರನ್ನು ಸೇವಾ ಭದ್ರತೆ ನೀಡದೆ, ಇಲ್ಲಿಯವರೆಗೆ ಕೆಲಸ ಮಾಡಿಸಿಕೊಂಡು ಅವರ ಸೇವೆಯನ್ನು ಕಡೆಗಣಿಸುತ್ತಿದೆ. ಎಲ್ಲಾ ಸರ್ಕಾರಿ ಕಾಲೇಜುಗಳ ಅಧಾರಸ್ತಂಭ ಆಗಿದ್ದ ಅವರು ಕಡಿಮೆ ವೇತನ ಪಡೆದು ಖಾಯಂ ನೌಕರರಂತೆ ಕೆಲಸ ಮಾಡುತ್ತಿದ್ದರು. ಹಲವಾರು ವರ್ಷ ದುಡಿದವರಿಗೆ ಸೇವಾ ಭದ್ರತೆ ಕೊಡದೆ ಇರುವುದು ಶಿಕ್ಷಣ ವ್ಯವಸ್ಥೆಗೆ ಮಾರಕವಾಗಿದೆ.

ಈಗ ವರ್ಗಗಳು ನಡೆಯದೇ ಇರುವುದರಿಂದ ತಮ್ಮ ಪಾಠ ಪ್ರವಚನಕ್ಕೆ ತೊಂದರೆಯಾಗಿದ್ದು ಪರೀಕ್ಷೆಗಳು ಬಂದರು ಸರಕಾರ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಮಾತನಾಡಿದರು. ವಿದ್ಯಾರ್ಥಿಗಳು ಪದವಿ ಕಾಲೇಜಿನಿಂದ ಬಸವೇಶ್ವರ ಸರ್ಕಲ್ ಮಾರ್ಗವಾಗಿ ತಹಸೀಲ್ದಾರ್ ಕಚೇರಿಯ ಆಡಳಿತ ಸೌಧದ ಮುಂದೆ ಆಗಮಿಸಿ, ಕಪ್ಪು ಹಲಗೆ ಇಟ್ಟು ಕುವೆಂಪು ಅವರ ಕುರಿತು ಅಣಕು ಪಾಠವನ್ನು ಮಾಡಿದರು. ಶೀಘ್ರ ನೇಮಕ ಮಾಡಬೇಕು ಎಂದು ಘೋಷಣೆ ಕೂಗಿ. ಈ ಮೂಲಕ ತಮಗೆ ಆಗುತ್ತಿರುವ ತೊಂದರೆಯನ್ನು ವ್ಯಕ್ತಪಡಿಸಿದರು.
ನಗರ ಕಾರ್ಯದರ್ಶಿ ಮಲ್ಲಮ್ಮ ಪಾಟೀಲ್ ಮುಖಂಡರಾದ ಓಂಕಾರ್ ಪವಾರ,
ರಮೇಶ್ ಹೂಗಾರ, ರೇವಣಸಿದ್ದ ಹರಿಂದ್ರಾಳ ಸೇರಿದಂತೆ ವಸತಿ ಪದವಿ ಕಾಲೇಜು ಹಾಗೂ ಸಾಮಾನ್ಯ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಎಬಿವಿಪಿ ಧ್ವಜವನ್ನು ಹಿಡಿದುಕೊಂಡು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ತಾಲೂಕು ದಂಡಾಧಿಕಾರಿ ಕೀರ್ತಿ ಚಾಲಕ್ ಮನವಿ ಸ್ವೀಕರಿಸಿದರು, ಎಎಸ್ಐ ಅಸ್ಕಿ ಮತ್ತು ಮನ್ನಾಬಾಯಿ ಪೊಲೀಸ್ ಸಿಬ್ಬಂದಿ ಭಾಗವಹಿಸಿದ್ದರು.



## ಎಸ್. ಟಿ .ಸಮುದಾಯಕ್ಕೆ ಕುರುಬರನ್ನು

# ಸೇರಿಸದಂತೆ ಒತ್ತಾಯ

ಮೊಳಕಾಲ್ಮೂರು: ಮೀಸಲಾತಿಯಿಂದ ವಂಚಿತವಾಗಿರುವ ಎಸ್ ಟಿ ಸಮುದಾಯಕ್ಕೆ ಕುರುಬರನ್ನು ಸೇರಿಸಬಾರದೆಂದು ಒತ್ತಾಯಿಸಿ ಮೊಳಕಾಲ್ಮುರಿನ ವಾಲ್ಮೀಕಿ ಮಹರ್ಷಿ ನಾಯಕ ಕ್ಷೇಮಭಿವೃದ್ಧಿ ಸಂಘದ ಪದಾಧಿಕಾರಿಗಳು ತಹಶೀಲ್ದಾರ್ ಜಗದೀಶ್ ರವರಿಗೆ ಮನವಿ ಪತ್ರ ಸಲ್ಲಿಸಿದರು.

ನಾಯಕ ಸಮುದಾಯವನ್ನು ಸಾಮಾಜಿಕವಾಗಿ ತುಳಿಯುವ ಉನ್ನಾರ ನಡೆಯುತ್ತಿದ್ದು ಮುಖ್ಯಮಂತ್ರಿಗಳು ಕುರುಬ ಸಮುದಾಯವನ್ನು ಎಸ್. ಟಿ.ಗೆ ಸೇರಿಸುವ ನಿರ್ಧಾರವನ್ನು ಕೈಗೊಂಡಿದ್ದು ಅದನ್ನು ಈ ಕೂಡಲೇ ಕೈಬಿಡಬೇಕು. ಬುಡಕಟ್ಟು ಸಂಸ್ಕೃತಿಯ ಹಿನ್ನೆಲೆ ಇರುವ ಮ್ಯಾಸಬೇಡ ಸಮುದಾಯವು ಶಿಕ್ಷಣ. ಆರೋಗ್ಯ. ಮತ್ತು ಆರ್ಥಿಕವಾಗಿ .ಸಾಮಾಜಿಕವಾಗಿ. ರಾಜಕೀಯವಾಗಿ ಹಿಂದುಳಿದಿದ್ದು. ಎಸ್ ಟಿ ಸಮುದಾಯಕ್ಕೆ ಸೇರಿದ ಕೆಲವು ವರ್ಗಗಳ ಜನರು ಮೀಸಲಾತಿಯನ್ನು ಕಬಳಿಸುತ್ತಿದ್ದಾರೆ. ಸರ್ಕಾರ ಜಾರಿ ಮಾಡಿರುವ 7.5% ಮೀಸಲಾತಿ ಇನ್ನೂ ದೊರೆತಿಲ್ಲ.



ಇದರ ಜೊತೆಗೆ ಎಲ್ಲಾ ರಂಗಗಳಲ್ಲೂ ಮುಂದುವರೆದಿರುವ ಕುರುಬ ಜನಾಂಗವನ್ನು ಎಸ್.ಟಿ. ಸಮುದಾಯಕ್ಕೆ ಸೇರಿಸಿ ನಮ್ಮನ್ನು ಸಾಮಾಜಿಕವಾಗಿ ತುಳಿಯುವ ಪ್ರಯತ್ನವಾಗಿದೆ ಎಂದು ದೂರಿದರು. ಕುರುಬ ಸಮುದಾಯವು ಮುಂದುವ–ರಿದ ಜಾತಿಗಳಿಗೆ ಸ್ಪರ್ಧೆ ನೀಡಬಲ್ಲಷ್ಟು ಬಲಾಢ್ಯರಾಗಿದ್ದು. ಇವರನ್ನು ನಮ್ಮೊಂದಿಗೆ ಸೇರಿಸಿದರೆ ನಾವು ಎಲ್ಲ ರಂಗಗಳಲ್ಲೂ ಅವಕಾಶಗಳನ್ನು ಕಳೆದುಕೊಂಡು ಶತಮಾನಗಳಷ್ಟು ಹಿಂದಕ್ಕೆ ಹೋಗುತ್ತೇವೆ ಎಂಬ ಆತಂಕ ವ್ಯಕ್ತಪಡಿಸಿದರು. ಕಾಂಗ್ರೆಸ್ ಸರ್ಕಾರವು ಈ ನಿರ್ಧಾರವನ್ನು ಕೈಬಿಡಬೇಕು.

ಇಲ್ಲದಿದ್ದರೆ ಮ್ಯಾಸ ಬುಡಕಟ್ಟು ಜನರಿಂದ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಸಂಘದ ಅಧ್ಯಕ್ಷರಾದ ಬಡೋಬ ನಾಯಕ. ಕಾರ್ಯದರ್ಶಿ ಡಿ. ಪೆನ್ನಯ್ಯ. ಖಜಾಂಚಿ ನಂಜಪ್ಪ ನಾಯಕ ಪಿಎಸ್. ಸದಸ್ಯರಾದ ಪಿ ಪಾಲಯ್ಯ ಕೋನಸಾಗರ. ನಾಗೇಶಪ.. ಜಿ.ಪಿ. ತಿಪ್ಪೇಸ್ವಾಮಿ. ಪರಮೇಶ್ವರಪ್ಪ. ಆನಂದ. ಬಿ. ಮಲ್ಲಯ್ಯ. ಓಬಣ್ಣ .ಎಸ್ಪಿ. ಇತರರು ಹಾಜರಿದ್ದರು

## ಎಸ್. ಟಿ .ಸಮುದಾಯಕ್ಕೆ ಕುರುಬರನ್ನು ಸೇರಿಸದಂತೆ ಒತ್ತಾಯ

ಮೊಳಕಾಲ್ಮೂರು: ಮೀಸಲಾತಿಯಿಂದ ವಂಚಿತವಾಗಿರುವ ಎಸ್ ಟಿ ಸಮುದಾಯಕ್ಕೆ ಕುರುಬರನ್ನು ಸೇರಿಸಬಾರದೆಂದು ಒತ್ತಾಯಿಸಿ ಮೊಳಕಾಲ್ಮುರಿನ ವಾಲ್ಮೀಕಿ ಮಹರ್ಷಿ ನಾಯಕ ಕ್ಷೇಮಭಿವೃದ್ಧಿ ಸಂಘದ ಪದಾಧಿಕಾರಿಗಳು ತಹಶೀಲ್ದಾರ್ ಜಗದೀಶ್ ರವರಿಗೆ ಮನವಿ ಪತ್ರ ಸಲ್ಲಿಸಿದರು.



ನಾಯಕ ಸಮುದಾಯವನ್ನು ಸಾಮಾಜಿಕವಾಗಿ ತುಳಿಯುವ ಉನ್ನಾರ ನಡೆಯುತ್ತಿದ್ದು ಮುಖ್ಯಮಂತ್ರಿಗಳು ಕುರುಬ ಸಮುದಾಯವನ್ನು ಎಸ್. ಟಿ.ಗೆ ಸೇರಿಸುವ ನಿರ್ಧಾರವನ್ನು ಕೈಗೊಂಡಿದ್ದು ಅದನ್ನು ಈ ಕೂಡಲೇ ಕೈಬಿಡಬೇಕು. ಬುಡಕಟ್ಟು ಸಂಸ್ಕೃತಿಯ ಹಿನ್ನೆಲೆ ಇರುವ ಮ್ಯಾಸಬೇಡ ಸಮುದಾಯವು ಶಿಕ್ಷಣ. ಆರೋಗ್ಯ. ಮತ್ತು ಆರ್ಥಿಕವಾಗಿ .ಸಾಮಾಜಿಕವಾಗಿ. ರಾಜಕೀಯವಾಗಿ ಹಿಂದುಳಿದಿದ್ದು. ಎಸ್ ಟಿ ಸಮುದಾಯಕ್ಕೆ ಸೇರಿದ ಕೆಲವು ವರ್ಗಗಳ ಜನರು ಮೀಸಲಾತಿಯನ್ನು ಕಬಳಿಸುತ್ತಿದ್ದಾರೆ. ಸರ್ಕಾರ ಜಾರಿ ಮಾಡಿರುವ 7.5% ಮೀಸಲಾತಿ ಇನ್ನೂ ದೊರೆತಿಲ್ಲ.

ಇದರ ಜೊತೆಗೆ ಎಲ್ಲಾ ರಂಗಗಳಲ್ಲೂ ಮುಂದುವರೆದಿರುವ ಕುರುಬ ಜನಾಂಗವನ್ನು ಎಸ್.ಟಿ. ಸಮುದಾಯಕ್ಕೆ ಸೇರಿಸಿ ನಮ್ಮನ್ನು ಸಾಮಾಜಿಕವಾಗಿ ತುಳಿಯುವ ಪ್ರಯತ್ನವಾಗಿದೆ ಎಂದು ದೂರಿದರು. ಕುರುಬ ಸಮುದಾಯವು ಮುಂದುವ–ರಿದ ಜಾತಿಗಳಿಗೆ ಸ್ಪರ್ಧೆ ನೀಡಬಲ್ಲಷ್ಟು ಬಲಾಢ್ಯರಾಗಿದ್ದು. ಇವರನ್ನು ನಮ್ಮೊಂದಿಗೆ ಸೇರಿಸಿದರೆ ನಾವು ಎಲ್ಲ ರಂಗಗಳಲ್ಲೂ ಅವಕಾಶಗಳನ್ನು ಕಳೆದುಕೊಂಡು ಶತಮಾನಗಳಷ್ಟು ಹಿಂದಕ್ಕೆ ಹೋಗುತ್ತೇವೆ ಎಂಬ ಆತಂಕ ವ್ಯಕ್ತಪಡಿಸಿದರು. ಕಾಂಗ್ರೆಸ್ ಸರ್ಕಾರವು ಈ ನಿರ್ಧಾರವನ್ನು ಕೈಬಿಡಬೇಕು.

ಇಲ್ಲದಿದ್ದರೆ ಮ್ಯಾಸ ಬುಡಕಟ್ಟು ಜನರಿಂದ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಸಂಘದ ಅಧ್ಯಕ್ಷರಾದ ಬಡೋಬ ನಾಯಕ. ಕಾರ್ಯದರ್ಶಿ ಡಿ. ಪೆನ್ನಯ್ಯ. ಖಜಾಂಚಿ ನಂಜಪ್ಪ ನಾಯಕ ಪಿಎಸ್. ಸದಸ್ಯರಾದ ಪಿ ಪಾಲಯ್ಯ ಕೋನಸಾಗರ. ನಾಗೇಶಪ.. ಜಿ.ಪಿ. ತಿಪ್ಪೇಸ್ವಾಮಿ. ಪರಮೇಶ್ವರಪ್ಪ. ಆನಂದ. ಬಿ. ಮಲ್ಲಯ್ಯ. ಓಬಣ್ಣ .ಎಸ್ಪಿ. ಇತರರು ಹಾಜರಿದ್ದರು.

## ಫಿಟ್ವೇಲ್ ಟೂಲ್ ಸಂಸ್ಥೆಯಲ್ಲಿ ರಸ್ತೆ

# ಸುರಕ್ಷತಾ ಜಾಗೃತಿ ಕಾರ್ಯಕ್ರಮ

ತುಮಕೂರು: ಅಂತರಸನಹಳ್ಳಿಯ ಕೈಗಾರಿಕಾ ಪ್ರದೇಶದಲ್ಲಿರುವ ಈಖಖಿ–ಘಾಇಐ TOOLS AND FORGINGS PRIVATE LIMITED ಸಂಸ್ಥೆಯಲ್ಲಿ ಕಾರ್ಮಿಕರಿಗಾಗಿ ರಸ್ತೆ ಸುರಕ್ಷತಾ ಜಾಗೃತಿ ಕಾರ್ಯಕ್ರಮವನ್ನು ಸೋಮವಾರ ಮಧ್ಯಾಹ್ನ ಆಯೋಜಿಸಲಾಯಿತು.



ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಶ್ರೀಯುತ ಪುರುಷೋತ್ತಮ್ ಹಾಗೂ ಹೆಚ್ಚುವರಿ ಪೊಲೀಸ್ ಅಧಿಕಾರಿ ಶ್ರೀಯುತ ಗೋಪಾಲ್ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿ, ಸಂಚಾರ ನಿಯಮ ಪಾಲನೆಯ ಅವಶ್ಯಕತೆ, ರಸ್ತೆ ಸುರಕ್ಷತೆಯ ಜವಾಬ್ದಾರಿ ಹಾಗೂ ಅಪಘಾತ ತಡೆ ಕುರಿತ ಸಂದೇಶ ನೀಡಿದರು. ಕಂಪನಿಯ ಮ್ಯಾನೇಜರ್ ಶ್ರೀಯುತ ಧನಂ–ಜಯ್ ಎಂ. ಅವರು ಸಂಸ್ಥೆ ಸದಾ ತನ್ನ ಕಾರ್ಮಿಕರ ಹಿತಾಸಕ್ತಿಗೆ ಬದ್ಧವಾಗಿದೆ ಎಂದು ತಿಳಿಸಿದರು.

ಕಂಪನಿಯ ಮಾಲೀಕರಾದ ಶ್ರೀಯುತ ಅನಂತ್ ಡಿ.ಎಸ್. ಅವರು ಅಖಖ ನಿಧಿಯಡಿ 10 ಬ್ಯಾರಿಕೇಡ್‌ಗಳು ಹಾಗೂ ಸೋಲಾರ್ ಬ್ಲಿಂಕರ್ ಲೈಟ್‌ಗಳನ್ನು ಜಿಲ್ಲಾ ಪೊಲೀಸ್ ಇಲಾಖೆಗೆ ಹಸ್ತಾಂತ–ರಿಸಿದರು. ಸಂಚಾರ ಅಪಘಾತಗಳನ್ನು ತಡೆಯಲು ಈ ನೆರವು ಮಹತ್ವದ್ದೆಂದು ಪೊಲೀಸರು ಪ್ರಶಂಸೆ ವ್ಯಕ್ತಪಡಿಸಿದರು. ಪ್ರತಿದಿನ ಸುಮಾರು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಸಂಚರಿಸುವ ಕರ್ನಾಟಕ ಹ್ಯಾಂಡ್ ಟೂಲ್ಸ್ ಕಾಂಪ್ಲೆಕ್ಸ್ ಪ್ರದೇಶದಲ್ಲಿ ಈ ಕ್ರಮಗಳು ರಸ್ತೆ ಸುರಕ್ಷತೆಯನ್ನು ಬಲಪಡಿಸಲಿವೆ ಎಂದು ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದರು.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.